# ಮಾಟಣ್ಣನ ಮೆಣಸಿನ ತೋಟ



**ಹಾಡ್ಲಹಳ್ಳಿ ನಾಗರಾಜ್**

ಕಲೆ: ಎಸ್.ವಿ. ಹೂಗಾರ್

ಒಂದು ಕೈಯಲ್ಲಿ ಒಂದರೊಳಗೊಂದು ಜೋಡಿಸಿ ಇಟ್ಟುಕೊಂಡಿದ್ದ ಪ್ಲಾಸ್ಟಿಕ್ ಬಕೆಟ್‌ಗಳು ಹಾಗೂ ಇನ್ನೊಂದು ಕೈಯಲ್ಲಿ ನಾಯಿ ಸರಪಳಿ ಹಿಡಿದಿದ್ದ ಮಾಟಣ್ಣ ತನ್ನ ಕೊತ್ತಿಕೆರೆ ಅಗಾಡಿಯ ಮೆಣಸಿನ ತೋಟದ ಕಡೆ ಅವಸರದಲ್ಲಿ ನಡೆದಿದ್ದ. ಸರಪಳಿಯ ಇನ್ನೊಂದು ತುದಿಯಲ್ಲಿದ್ದ ಅವನ ಮೆಚ್ಚಿನ ನಾಯಿ 'ಕುಳ್ಳಿ' ಕುಂಯ್ ಕುಂಯ್ ಸದ್ದು ಮಾಡುತ್ತಾ ಹಿಂಬಾಲಿಸುತ್ತಿತ್ತು.

ಒಂದು ದಿಕ್ಕಿಗೆ ದಿಣ್ಣೆ ಬಯಲು, ಇನ್ನು ಮೂರು ದಿಕ್ಕಿಗೆ ಕಾಡು ಆವರಿಸಿಕೊಂಡಿರುವ ಆ ಎರಡೂವರೆ ಎಕರೆ ಜಾಗ ಬಲು ಹಿಂದೆ ಕೊತ್ತಿಕೆರೆ ಎಂಬ ಸಣ್ಣ ಕಟ್ಟೆಯಾಗಿದ್ದು ಕ್ರಮೇಣ ಮುಚ್ಚಿಹೋಗಿ, ಮಾಟಣ್ಣನ ಅಜ್ಜನ ಕಾಲಕ್ಕೆ ತರಿ ಜಮೀನು ಎಂದು ಅವರಿಗೆ ದರಕಾಸ್ತಿನಲ್ಲಿ ಮಂಜೂರಾಗಿ ಬಂದಿತ್ತು.

ಯಾವಾಗಲೂ ಕಾಡುಗತ್ತಲೆ ಕವಿದಿದ್ದು, ಸರಿಯಾಗಿ ಬೆಳೆ ತೆಗೆಯಲು ಸಾಧ್ಯವಾಗದ ಆ ಅಗಾಡಿಯನ್ನು ಮಾಟೇಗೌಡರ ಅಣ್ಣ ಪಾಲಾಗುವ ಕಾಲಕ್ಕೆ ತಮ್ಮನ ತಲೆಗೆ ಕಟ್ಟಿ ಕೈತೊಳೆದುಕೊಂಡಿದ್ದರು.

ಊರ ಬಯಲಿನಲ್ಲಿ ಒಂದೇ ಕಡೆ ಇದ್ದ ಮೂರು ಎಕರೆ ಗದ್ದೆಯ ಜೊತೆಗೆ ಅದಕ್ಕೆ ಹತ್ತಿರವಾಗುವಂತೆ ಇದ್ದ ಐದೆಕರೆ ತೋಟವನ್ನು ತಮ್ಮ ಹೆಸರಿಗೆ ಇಟ್ಟುಕೊಂಡು, ದೂರದ ಕಾಡು ತೋಟ, ಹೊರಟ್ಟೆಯಲ್ಲಿ ಅರ್ಧ ಎಕರೆ ಗದ್ದೆ ಜತೆಗೆ ತರಿ ಜಮೀನು ಎಂದು ಈ ಎರಡೂವರೆ ಎಕರೆ ಕೊತ್ತಿಕೆರೆ ಅಗಾಡಿಯನ್ನು ಮಾಟಣ್ಣನ ಹೆಸರಿಗೆ ಬರೆದು ಕಣ್ಣೊರೆಸುವ ತಂತ್ರ ಮಾಡಿದ್ದರು.

'ಅಣ್ಣನ ಎದುರಿಗೆ ಯಾವಾಗಲೂ ಕೋಲೆ ಬಸವನ ಹಂಗೆ ತಲೆ ಅಲ್ಲಾಡಿಸ್ಗಂಡು, ಅವನು ಕೊಟ್ಟ ಯಾತಕೂ ಬ್ಯಾಡದ ಈ ಹಾಳು ಅಗಾಡಿಗೆ ಹೂಂ ಅಂದ್ಕಂಪಡಿದೀಯ' ಎಂದು ಮಾಟಣ್ಣನ ಹೆಂಡತಿ, ಇತ್ತೀಚೆಗೆ ಸಾಯುವವರೆಗೂ ಗಂಡನ ಬಗ್ಗೆ ಗೊಣಗಾಡಿಕೊಂಡೇ ಇದ್ದಳು. ಪಟೇಲರ ಮನೆ ಎಲಕ್ಕಿ ಹಡ್ಲಿನಿಂದ ಹರಿದು ಬರುತ್ತಿದ್ದ ಜಿನುಕಲು ನೀರು ಕೊತ್ತಿಕೆರೆ ಅಗಾಡಿ ಬಳಸಿ ತಗ್ಗಿನ ಸಿದ್ದೇಗೌಡರ ಅಡಿಕೆ ತೋಟದ ಕೊಲ್ಲಿ ಸೇರುತ್ತಿದ್ದುದರಿಂದ ಮಾಟಣ್ಣನಿಗೆ ವರ್ಷಕಾಲ ನೀರಿಗೆ ಏನೂ ಸಮಸ್ಯೆ ಇರಲಿಲ್ಲ. ಆದರೆ ಏನೇ ಹೋರಾಟ ಮಾಡಿ ಅಲ್ಪ ಸ್ವಲ್ಪ ಬೆಳೆ ತೆಗೆದರೂ ಕಾಡು ಪ್ರಾಣಿಗಳ ಉಪಟಳದಿಂದಾಗಿ ಅದನ್ನೂ ಉಳಿಸಿಕೊಳ್ಳಲಾಗುತ್ತಿರಲಿಲ್ಲ. ಹಾಗಾಗಿ ಬರು ಬರುತ್ತಾ ಅಗಾಡಿ ಹಾಗೆಯೇ ಪಾಳಾಗಿ ಉಳಿದಿತ್ತು.

ಮಾಟಣ್ಣನ ಹೆಂಡತಿ ಕಾಲವಾದ ನಂತರ ಮನೆಯ ವ್ಯವಹಾರವನ್ನೆಲ್ಲ ಮಗ-ಸೊಸೆ ವಹಿಸಿಕೊಂಡಿದ್ದರು. ಮಕ್ಕಳು ಆಗಲೇ ಮಾಧ್ಯಮಿಕ ಶಾಲೆಗೆ ಹೋಗುತ್ತಿದ್ದು, ಖರ್ಚಿನ ಬಾಬತ್ತು ಹೆಚ್ಚಾಗುತ್ತಿದ್ದುದರಿಂದ ಮಗ-ಸೊಸೆ ವರಮಾನ ಹೆಚ್ಚಿಸುವ ಉಪಾಯ ಹುಡುಕತೊಡಗಿದ್ದರು.